ಅ) ರಾಜ್ಯದಲ್ಲಿ ರೇಷ್ಮೆ ಇಲಾಖಾವತಿಯಿಂದ ಯಾವ ಯಾವ ಫಲಾನುಭವಿಗಳಿಗೆ ಎಸ್.ಇ.ಪಿ ಸಾಲವನ್ನು 2000-01, 2001-02, 2002-03ನೇ ಸಾಲಿನಲ್ಲಿ ವಿತರಣೆ ಮಾಡಲಾಗಿದೆ?

ಆ) ಈ ಸಾಲ ವಿತರಣೆ ಮಾಡಿದ ಫಲಾನುಭವಿಗಳಿಗೆ ಸಬ್ಸಿಡಿಯನ್ನು ವಿತರಿಸಲಾಗಿದೆಯೇ; ಎಷ್ಟು ಮೊತ್ತದ ಸಬ್ಸಿಡಿ ಹಣವನ್ನು ವಿತರಿಸಲಾಗಿದೆ

ಇ) ತುಮಕೂರು ಜಿಲ್ಲೆಯಲ್ಲಿ ಇಸ್.ಇ.ಪಿ. ಯೋಜನೆಯಡಿಯಲ್ಲಿ ಸಾಲ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಈ) ಯಾವ ಯಾವ ಫಲಾನುಭವಿಗಳಿಗೆ ಸಬ್ಸಿಡಿಯನ್ನು ವಿತರಿಸಲಾಗಿದೆ; ವಿವರ ನೀಡುವುದು?

ಉ) ಸಬ್ಸಿಡಿ ವಿತರಿಸದ ಹಾಗೂ ರೈತರಿಗೆ ಅನಾವಶ್ಯಕವಾಗಿ ತೊಂದರೆ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ರೇಷ್ಮೆ ಇಲಾಖೆಯಲ್ಲಿ ಎಸ್.ಇ.ಪಿ. ಕಾರ್ಯಕ್ರಮ ಅನುಷ್ಠಾನದಲ್ಲಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿನ ಅಂತರ್ಜಲ ಮಟ್ಟ ಕಾಪಾಡುವುದು

3074 (3577) : ಶ್ರೀ ಚೆನ್ನಿಗಪ್ಪ ಸಿ (ಕೊರಟಗೆರೆ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ಮಟ್ಟ ಕುಸಿದಿರುವ ಒಟ್ಟು ಜಿಲ್ಲೆಗಳ ಸಂಖ್ಯೆ ಎಷ್ಟು;

ಆ) ಅಂತರ್ಜಲ ಮಟ್ಟ ಕುಸಿದಿರುವ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟವನ್ನು ಕಾಪಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಇದಕ್ಕೆ ತಗಲಿರುವ ವೆಚ್ಚವೇನು;

ಇ) ಅಂತರ್ಜಲ ಮಟ್ಟ ಕುಸಿಯದಂತೆ ಸೂಕ್ತ ರೀತಿಯಲ್ಲಿ ಕ್ರಮ ಜರುಗಿಸಿ ನೀರಿನ ಸೌಕರ್ಯವನ್ನು ಕಲ್ಪಿಸಲು ಕೈಗೊಳ್ಳುವ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಕರ್ನಾಟಕ ರಾಜ್ಯದ ಎಲ್ಲಾ 27 ಜಿಲ್ಲೆಗಳಲ್ಲಿಯೂ ಅಂತರ್ಜಲ ಮಟ್ಟವು ಕುಸಿದಿರುವುದು ಕಂಡು ಬಂದಿದೆ.

ಆ) ಅಂತರ್ಜಲ ಮಟ್ಟವನ್ನು ಕಾಪಾಡಲು ಸರ್ಕಾರವು ಅಂತರ ನಿಯಮವನ್ನು 1996ರಿಂದ ಸರ್ಕಾರಿ ಆದೇಶ ಸಂಖ್ಯೆ: ಸಿಐ 255 ಎಂಜಿಎಸ್ 96 ದಿನಾಂಕ: 4.10.96ರನ್ವಯ ಜಾರಿಗೆ ತಂದಿದ್ದು, ಅದರಂತೆ ಒಂದು ಕೊಳವೆ ಬಾವಿಯಿಂದ ಮತ್ತೊಂದು ಕೊಳವೆ ಬಾವಿಯ ಮಧ್ಯೆ 250 ಮೀಟರ್ ಅಂತರವನ್ನು ಕಾಯ್ದುಕೊಳ್ಳುವಂತೆ ನಿಗದಿಸಲಾಗಿದೆ. ಹೀಗೆ ಸಂರಕ್ಷಿಸಿದ ಅಂತರ್ಜಲವನ್ನು ಕಾಯ್ದುಕೊಳ್ಳಲು ಅಂತರ್ಜಲ ಮಟ್ಟವನ್ನು ವೃದ್ಧಿಪಡಿಸುವುದು ಅವಶ್ಯಕವಿರುತ್ತದೆ. ಇದಲ್ಲದೆ, ಕರ್ನಾಟಕ ಅಂತರ್ಜಲ (ವಿನಿಮಯ ಮತ್ತು ನಿಯಂತ್ರಣ) ಕಾಯಿದೆಯೊಂದನ್ನು ರಚಿಸಲಾಗಿದ್ದು, ಈ ಕಾಯಿದೆಯನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಈ ಹಿನ್ನೆಲೆಯಲ್ಲಿ 1995ರಿಂದ ಪ್ರಾರಂಭಿಸಿ, ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲು ಕಾರ್ಯಕ್ರಮವನ್ನು ಪ್ರಯೋಗಾತ್ಮಕವಾಗಿ ಹಮ್ಮಿಕೊಂಡಿದೆ. ಅದರಂತೆ, ರಾಜ್ಯದಾದ್ಯಂತ ಕ್ಲಿಷ್ಟಕರವೆಂದು ವರ್ಗೀಕರಣ ಮಾಡಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳಾದ ಚೆಕ್ ಡ್ಯಾಂ, ಇಂಗು ಬಾವಿ, ಇಂಗು ಕೊಳವೆ ಬಾವಿ, ಗೋಕಟ್ಟೆಗಳಲ್ಲಿ ಹೂಳು ತೆಗೆಯುವುದು ಇತ್ಯಾದಿ ರಚನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದುವರೆಗೂ 1091 ವಿವಿಧ ಅಂತರ್ಜಲ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲಾಗಿದ್ದು ಇದಕ್ಕೆ ರೂ. 667.23 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಇ) ಅಂತರ್ಜಲ ಮಟ್ಟದ ಕುಸಿತವನ್ನು ತಡೆಯಲು ಹಾಗೂ ವೃದ್ಧಿಪಡಿಸಲು ಜಲಸಂಪನ್ಮೂಲ ಕ್ರೋಢೀಕರಣ ಯೋಜನೆಯಡಿಯಲ್ಲಿ 58 ತಾಲ್ಲೂಕುಗಳಲ್ಲಿ 50,221 ಸಂಖ್ಯೆಯ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ರೂ. 471.00 ಕೋಟಿ ಅಂದಾಜು ವೆಚ್ಚದಲ್ಲಿ ಹಂತ ಹಂತವಾಗಿ 5 ವರ್ಷಗಳ ಅವಧಿಯಲ್ಲಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕಾ ವತಿಯಿಂದ ಸಾಲ ಪಡೆದ ಫಲಾನುಭವಿಗಳು

3075 (3578) : ಶ್ರೀ ಚೆನ್ನಿಗಪ್ಪ ಸಿ (ಕೊರಟಗೆರೆ) : ಮಾನ್ಯ ಸಣ್ಣ ಪ್ರಮಾಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಇಲಾಖಾ ವತಿಯಿಂದ ಎಷ್ಟು ಮಂದಿ ಫಲಾನುಭವಿಗಳಿಗೆ ಸಣ್ಣ ಪ್ರಮಾಣದ ಕೈಗಾರಿಕೆಯನ್ನು ತೆರೆಯಲು 2000-01, 2001-02 ಮತ್ತು 2002-03ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಾಲದ ಮೊತ್ತವೆಷ್ಟು?

ಆ) ಈ ಸಾಲಿನ ಮೊತ್ತದ ಜೊತೆಗೆ ಸಬ್ಸಿಡಿ ಹಣವನ್ನು ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು:

ಇ) ಇನ್ನು ಎಷ್ಟು ಮಂದಿ ಫಲಾನುಭವಿಗಳಿಗೆ ಸಬ್ಸಿಡಿ ಹಣವನ್ನು ಸಂದಾಯ ಮಾಡಬೇಕಾಗಿದೆ?

ಈ) ಸಬ್ಸಿಡಿ ಹಣ ಮಂಜೂರಾಗದೆ ಸಣ್ಣ ಪ್ರಮಾಣದ ಕೈಗಾರಿಕೆಯ ಮಾಲೀಕರು ತೀವ್ರ ರೀತಿಯ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಉ) ಹಾಗಿದ್ದರೆ, ಸಬ್ಸಿಡಿ ಹಣವನ್ನು ಸಕಾಲದಲ್ಲಿ ಫಲಾನುಭವಿಗಳಿಗೆ ಸಂದಾಯ ಮಾಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು):

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಇಲಾಖಾವತಿಯಿಂದ ಸಣ್ಣ ಪ್ರಮಾಣದ ಕೈಗಾರಿಕೆಯನ್ನು ತೆರೆಯಲು ಯಾವುದೇ ಸಾಲ ಯೋಜನೆ ಇರುವುದಿಲ್ಲ.

ಆ) 1. ಸಾಲದ ಯೋಜನೆ ಇರುವುದಿಲ್ಲ.

2. 2002-03ನೇ ಸಾಲಿನವರೆಗೂ 3184 ಘಟಕಗಳಿಗೆ ರೂ. 4501.51 ಲಕ್ಷಗಳ ಸಹಾಯ ಧನವನ್ನು ಬಿಡುಗಡೆಗೊಳಿಸಲಾಗಿದೆ.

ಇ) 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿಗಳಷ್ಟು ಸಹಾಯಧನ ಬಾಕಿ ಇರುತ್ತದೆ.